**ದಿನಾಂಕ: 21.12.2020 ರಂದು 10–30 ಕ್ಕೆ ಶ್ರೀ ಹೆಚ್. ನಾಗರಾಜಪ್ಪ, ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್–177 (ಜೆ.ಪಿ.ನಗರ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾರ್ಡ್–177ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ ಅಭಿವೃದ್ಧಿ ಕಾಮಗಾರಿಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಮತ್ತು ಕೊವಿಡ್–19ರ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| **ಅಧ್ಯಕ್ಷರು** | ನೋಡಲ್ ಅಧಿಕಾರಿ |
| **ಸದಸ್ಯ ಕಾರ್ಯದರ್ಶಿ** | ವಾರ್ಡ್ 177ರ ಸಹಾಯಕ ಅಭಿಯಂತರರು |
| **ಸದಸ್ಯರುಗಳು** | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| **ಸದಸ್ಯರುಗಳು** | ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು |
| **ಸದಸ್ಯರುಗಳು** | ಜೆ.ಪಿ.ನಗರ ಸಹಾಯಕ ಕಂದಾಯ ಅಧಿಕಾರಿಗಳು |
| **ಸದಸ್ಯರುಗಳು** | ತೋಟಗಾರಿಕಾ ಅಧೀಕ್ಷಕರು (ದಕ್ಷಿಣ) |
| **ಸದಸ್ಯರುಗಳು** | ಬೆಸ್ಕಾಂ ಅಧಿಕಾರಿಗಳು |
| **ಸದಸ್ಯರುಗಳು** | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ರೋಡ್ ಇನ್‌ಫ್ರಾ) |
| **ಸದಸ್ಯರುಗಳು** | ಕಂದಾಯ ಪರಿವೀಕ್ಷಕರು, ವಾರ್ಡ್ 177 |
| **ಸದಸ್ಯರುಗಳು** | ಬೀದಿ ದೀಪ ನಿರ್ವಹಣೆಗಾರರು |
| **ಸದಸ್ಯರುಗಳು** | ಜೆ.ಪಿ.ನಗರ ಪೋಲೀಸ್ ಠಾಣಾಧಿಕಾರಿ |
| **ಸಾರ್ವಜನಿಕರು** | ಶ್ವೇತಾ .ಎಸ್ WOW GROUP (WOW) |
| **ಸಾರ್ವಜನಿಕರು** | ಉಮೇಶ್, ಮಾರ್ಷಲ್ ಬಿಬಿಎಂಪಿ |
| **ಸಾರ್ವಜನಿಕರು** | ಎಂ.ವಿ. ಕೆಂಪೇಗೌಡ |

## :ನಡಾವಳಿಯ ವರದಿ:

- ಅಧ್ಯಕ್ಷರು ಮಾತನಾಡುತ್ತಾ ಹಿಂದಿನ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಬಗ್ಗೆ ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

**ಪು.ತಿ.ನೋ**

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

- ಸಿನಿಯರ್ ಸಿಟಿಜನ್ ಪಾರ್ಕಿನ ಒಳಗಡೆ ಕಸದ ಬುಟ್ಟಿಗಳು ಹಾಳಾಗಿದ್ದು, ಅದನ್ನು ತೆರವುಗೊಳಿಸಿ ಹೊಸದಾಗಿ ಕಸದ ಬುಟ್ಟಿಗಳನ್ನು ಇಡುವಂತೆ ಯೋಜನೆ (ದ) ರವರಿಗೆ ಸೂಚಿಸುವಂತೆ ಚರ್ಚಿಸಲಾಯಿತು.

- ರಿಂಗ್ ರೋಡ್‌ನ ರಸ್ತೆಗಳಲ್ಲಿ ಅಲ್ಲಲ್ಲಿ ಬೆಸ್ಕಾಂರವರು ಕೇಬಲ್ ಅಳವಡಿಸಲು ಅಗೆದಿರುವುದನ್ನು ದುರಸ್ಥಿಗೊಳಿಸಲು ಸೂಚಿಸಲಾಯಿತು.

- ಸರ್ವೀಸ್ ರಸ್ತೆಯ ಮಾಂಡೋವಿ ಮೋಟಾರ್ಸ್‌ನ ಹತ್ತಿರ ಡೇಬ್ರಿಸ್‌ಅನ್ನು ತೆರವುಗೊಳಿಸಿ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲು ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಸೂಚಿಸಲಾಯಿತು.

- ಕೊವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಸುಮಾರು 952 ಜನರಿಗೆ ಕೊವಿಡ್ ಸೋಂಕು ತಗುಲಿದ್ದು, ಅದರಲ್ಲಿ 19 ಜನ ಮರಣ ಹೊಂದಿದ್ದು, 24 ಆಕ್ಟಿವ್ ಕೇಸ್‌ಗಳು ಇರುವುದಾಗಿ ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.

- 5ನೇ ಅಡ್ಡರಸ್ತೆ, ಕೆಎಸ್‌ಆರ್‌ಟಿಸಿ ಬಡಾವಣೆಯಲ್ಲಿ ಡಾಂಬರೀಕರಣಕ್ಕೆ ಕೋರಿದರು.

- 18ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆಗಳಲ್ಲಿ ಕತ್ತರಿಸಿ ಹಾಕಿರುವ ಮರದ ರೆಂಬೆ-ಕೊಂಬೆಗಳನ್ನು ತೆರವುಗೊಳಿಸುವಂತೆ ಅರಣ್ಯ ಇಲಾಖೆರವರಿಗೆ ಸೂಚಿಸಲಾಯಿತು.

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಹಾಗೂ ಮೂರನೇ ಶನಿವಾರ ಬೆಳಿಗ್ಗೆ 10:30 ಘಂಟೆಗೆ ಇದೇ ರೀತಿಯಾಗಿ ಮಾಸಿಕ 2 ಬಾರಿ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಹಾಗೂ ಈ ಸಭೆಯಲ್ಲಿ ತಿಳಿಸಿರುವ ಸಮಸ್ಯೆಗಳನ್ನು ಬಗೆಹರಿಸಲು ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು.

- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ರಾಮು .ಎಸ್ ರವರು ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಧ್ಯಕ್ಷರು**
**ವಾರ್ಡ್ ಸಮಿತಿ, ವಾರ್ಡ್ ನಂ. 177**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**